


# ಶಾಪಿಂಗ್@ವ್ಯಸನ

## ಶಾಪಿಂಗ್ ಟಿಪ್ಸ್

ಅಮೆಜಾನ್, ಫ್ಲಿಪ್‌ಕಾರ್ಟ್ ಹೆಸರಿನಲ್ಲಿ ನಂಬಲು ಅಸಾಧ್ಯವಾದ ಆಫರ್‌ಗಳ ಹೊತ್ತ ಸಂದೇಶಗಳು ವಾಟ್ಸಾಪ್‌ನಲ್ಲಿ ಬರಬಹುದು. ಈ ಜನಪ್ರಿಯ ಸೈಟ್‌ಗಳ ಗ್ರಾಹಕರ ಖಾತೆಗಳ ಮಾಹಿತಿ ಕದಿಯುವ ಯತ್ನವೂ ನಡೆಯಬಹುದು. ಕೆಲವು ಸಲ ಐ-ಫೋನ್, ಸ್ಯಾಮ್‌ಸಂಗ್ ಅಥವಾ ಇನ್ನಾವುದೇ ಜನಪ್ರಿಯ ಬ್ರ್ಯಾಂಡ್‌ನ ಹೆಸರಲ್ಲೂ ಆಫರ್‌ಗಳು ಬರಬಹುದು. 'ಸುಲಭದ ಪ್ರಶ್ನೆಗೆ ಉತ್ತರಿಸಿ ಬಹುಮಾನ ಗೆಲ್ಲಿ' ಎನ್ನುವ ಆಮಿಷಗಳೂ ಇರುತ್ತವೆ. ಅಸಲಿ ಕಂಪನಿಗಳೆಂದು ಭಾವಿಸಿ ನಿಮ್ಮ ಮಾಹಿತಿ ತುಂಬಿದರೆ ಮುಗಿಯಿತು. ಅನುಮಾನಾಸ್ಪದ ಇಂಥ ಆಫರ್‌ಗಳ ಸಂದೇಶಗಳನ್ನು ಡಿಲೀಟ್ ಮಾಡಿ.

ಸೈಬರ್ ಸೆಕ್ಯೂರಿಟಿ ಸಂಸ್ಥೆಯ ಸಮೀಕ್ಷೆ. ಗ್ರಾಹಕರು ಹೆಚ್ಚಿದಂತೆ ಸೈಬರ್ ಬೆದರಿಕೆಗಳೂ ಏರಿಕೆಯಾಗಿವೆ. ಪ್ರಸಕ್ತ ವರ್ಷದ ಎರಡನೇ ತ್ರೈಮಾಸಿಕದಲ್ಲಿ ನಿಮಿಷಕ್ಕೆ 419 ಬೆದರಿಕೆಗಳು ಕಂಡುಬಂದಿವೆ. ಮೊದಲ ತ್ರೈಮಾಸಿಕಕ್ಕೆ ಹೋಲಿಸಿದರೆ ಸೈಬರ್ ಕ್ರಿಮಿನಲ್‌ಗಳ ಬೆದರಿಕೆ ಅಥವಾ ವಂಚನೆಯು 12 ಪರ್ಸೆಂಟ್ ಏರಿಕೆಯಾಗಿದೆ.

## ಯುವಜನರೇ ಗುರಿ!

ಆನ್‌ಲೈನ್ ಶಾಪಿಂಗ್‌ನ ಪ್ರಮುಖ ಗ್ರಾಹಕರಾಗಿ ಯುವ ಸಮುದಾಯವನ್ನು ಗುರುತಿಸಲಾಗುತ್ತದೆ. ಹೆಚ್ಚಿನ ರಿಯಾಯಿತಿ, ಕೂತಲ್ಲೇ ಶಾಪಿಂಗ್ ಮಾಡುವ ಅನುಕೂಲ ಇಲ್ಲಿಯದು. ಸಮಯ, ಪ್ರಯಾಣದ ವೆಚ್ಚ ಎಲ್ಲವೂ ಉಳಿತಾಯ. ಆದರೆ, ಇದು ವ್ಯಸನವಾಗಿ ರೂಪಾಂತರವಾಗುತ್ತಿದೆ.

ಕಳೆದ ನಾಲ್ಕೈದು ವರ್ಷಗಳಲ್ಲಿ ಆನ್‌ಲೈನ್ ಶಾಪಿಂಗ್ ಅನ್ನುವುದು ಅನೇಕನ್ನು ಕಾಡುತ್ತಿರುವ ವ್ಯಸನವಾಗಿದೆ. ಕೃತಕ ಬುದ್ಧಿಮತ್ತೆಯನ್ನು ಬಳಸಿ ಮಾರಾಟಗಾರರು ಗ್ರಾಹಕರನ್ನು ತಮ್ಮ ಜಾಲದಲ್ಲಿ ಸಿಲುಕಿಸುತ್ತಿದ್ದಾರೆ. ತಮಗಿದು ಬೇಕೇಬೇಕು ಎನ್ನುವಷ್ಟರ ಮಟ್ಟಿಗೆ ಹುಸಿ ಭ್ರಮೆಯನ್ನು ಸೃಷ್ಟಿಸಲಾಗುತ್ತಿದೆ. ಖರೀದಿಸುವ ಹಂಬಲ, ಆದರೆ ಸಾಕಷ್ಟು ಆದಾಯವಿಲ್ಲ. ಇಂಥ ಹೊತ್ತಿನಲ್ಲಿ ಕ್ರೆಡಿಟ್ ಕಾರ್ಡ್ ಬಳಸಿ ಸಾಲಗಾರರಾಗುತ್ತಿದ್ದಾರೆ. ಸಾಲದ ಒತ್ತಡದಿಂದ ಖಿನ್ನತೆ ಮತ್ತು ಇತರೆ ಆರೋಗ್ಯ ಸಮಸ್ಯೆಗಳು ಸೃಷ್ಟಿಯಾಗುತ್ತಿವೆ ಎಂದು 'ಗಾರ್ಟ್‌ನರ್' ಎನ್ನುವ ಸಂಶೋಧನಾ ಸಂಸ್ಥೆಯ ವರದಿಯಲ್ಲಿ ಹೇಳಲಾಗಿದೆ.

ವಿಶ್ವ ಆರೋಗ್ಯ ಸಂಸ್ಥೆಯು 'ಆನ್‌ಲೈನ್ ಶಾಪಿಂಗ್' ಅನ್ನು ವ್ಯಸನವೆಂದು ಗುರುತಿಸಿದ್ದು, 2024ನೇ ವರ್ಷವನ್ನು 'ವ್ಯಸನ ನಿವಾರಣೆ ವರ್ಷ'ವಾಗಿ ಆಚರಿಸಲು ಚಿಂತನೆ ನಡೆಸಿದೆ.

## ಕಲೆಯೂ ಹೌದು, ಕೊಳೆಯೂ ಹೌದು

ಆನ್‌ಲೈನ್ ಶಾಪಿಂಗ್‌ನಲ್ಲಿ ಬಾಧಕಗಳು ಸಾಲುಸಾಲಾಗಿದ್ದರೂ, ಧನಾತ್ಮಕ ಅಂಶಗಳೂ ಅದರಲ್ಲಿವೆ. ಮಗಳ ಬರ್ತ್‌ಡೇಗೆ ಬೇಕಾದ ಡ್ರೆಸ್ಸು, ಹೆಂಡತಿಗೆ ಬೇಕಾದ ಸೀರೆ, ಬಹಳ ದಿನದಿಂದ ಅಗತ್ಯವಾಗಿದ್ದ ಕುಕ್ಕರ್, ಮಗನಿಗೆ ಬೇಕಾದ ಮೊಬೈಲ್, ಅಪ್ಪನಿಗೆ ಬೇಕಾದ ಬಿ.ಪಿ ಮಾತ್ರೆಗಳು, ಅಮ್ಮನಿಗೆ ಬೇಕಾದ ಸ್ಪಟಿಕ ಮಾಲೆ – ಇವೆಲ್ಲವನ್ನೂ ಖರೀದಿಸಲು ಮೊದಲಾಗಿದ್ದರೆ ಎಷ್ಟೆಲ್ಲ ಅಂಗಡಿಗೆ ಅಲೆದಾಡಬೇಕಾಗಿತ್ತು. ಈಗ ಮೊಬೈಲ್ ಇದ್ದರೆ ಸಾಕು. ಕೂತಲ್ಲಿಯೇ ಪಟಾಪಟ್ ಶಾಪಿಂಗ್. ಕೋವಿಡ್ ಕಾಲಘಟ್ಟದಲ್ಲಿ ಜನಪ್ರಿಯವಾಗಿ ವಿಸ್ತಾರವಾಗುತ್ತಿರುವ ಆನ್‌ಲೈನ್ ಶಾಪಿಂಗ್ ಹೆಚ್ಚು ಅನುಕೂಲಕರ.

ಆನ್‌ಲೈನ್ ಶಾಪಿಂಗ್ ಮಾಡುವಾಗ ನಾವು ನೆನಪಿಡಬೇಕಾದ ಸಂಗತಿ ಸರಳವಾದುದು: ಅಗತ್ಯಕ್ಕೆ ತಕ್ಕಂತೆ ಇದ್ದಲ್ಲಿ ಶಾಪಿಂಗ್ ಹಿತಕರವಾಗಬಲ್ಲದು. ಹದ ತಪ್ಪಿದಲ್ಲಿ, ಕೊಳ್ಳುಬಾಕತನದ ನಾವು ನಮ್ಮನ್ನು ಸಾಲದ ಸುಳಿಗೂ ಸಿಲುಕಿಸಬಹುದು. ನಾವು ವಂಚನೆಗೆ ಕೂಡ ಒಳಗಾಗಬಹುದು. ಬಲ್ಲವರ ಪಾಲಿಗೆ ಶಾಪಿಂಗ್ ಎನ್ನುವಂತಹದ್ದೊಂದು ಕಲೆ. ಎಚ್ಚರತಪ್ಪಿದಲ್ಲಿ ಅದು ಕೊಳೆಯೂ ಆಗಬಲ್ಲದು.

ಪ್ರತಿಕ್ರಿಯಿಸಿ: feedback@sudha.co.in